# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

**ಪಿಡಬ್ಲ್ಯೂ:17**

ಎಸ್.ಸಿ **ಕೇಸ್ ಸಂಖ್ಯೆ:501-23** ಹೆಚ್ಚುವರಿ ಸಾಕ್ಷಿ:3

| | | |
|---|---|---|
| **ಸಾಕ್ಷಿದಾರರ ಹೆಸರು** | : | ಕಸ್ತೂರಿ ಒಡೆಯರ್ |
| **ತಂದೆ ಹೆಸರು** | : | ಲಕ್ಷ್ಮಣ್ ಒಡೆಯರ್ |
| **ವಯಸ್ಸು** | : | 43 |
| **ವೃತ್ತಿ** | : | ಹಿರಿಯ ವೈಜ್ಞಾನಿಕ ಅಧಿಕಾರಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಮಂಗಳೂರು |
| **ವಾಸ** | : | ಮಂಗಳೂರು |

**ದಿನಾಂಕ: 18-06-2026** ಸಾಕ್ಷಿದಾರರು ವಿಸಿ ಮುಖಾಂತರ ನೊಡಲ್ ಆಫೀಸರ್ ಆದ ಪದ್ಮಜ ಕಲ್ ಗುಟ್ಕರ್, ಬಿನ: ವಿಠಲ್ ಕಲ್‌ಗುಟ್ಕರ್ 33 ವರ್ಷ, ಸೈಂಟಿಫಿಕ್ ಆಫೀಸರ್, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ ಮಂಗಳೂರು ರವರ ಸಮಕ್ಷಮ ಹಾಜರಾಗಿದ್ದು, ಸದ್ರಿ ಸಾಕ್ಷಿಯ ಪಮಾಣ ವಚನ ಮಾಡಿಸಲಾಯಿತು.

## ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ

ದಿನಾಂಕ:21-10-2022ರಂದು ರಾಕೇಶ್ ಶೆಟ್ಟಿ ಶಂಕರನಾರಾಯಣ ಪೋಲೀಸ್ ಠಾಣಾ ಪೋಲೀಸ್ ಪೇದೆ ಶಂಕರನಾರಾಯಣ ಪೋಲೀಸು ಠಾಣೆಗೆ ಸಂಬಂಧಿಸಿದ ಅಪರಾಧ ಸಂಖ್ಯೆ 94/2022ರಲ್ಲಿ ನಾಲ್ಕು ಸೀಲು ಮಾಡಿದ ಸ್ವತ್ತುಗಳನ್ನು ನಮ್ಮ ಕಚೇರಿಗೆ ಹಾಜರುಪಡಿಸಿದ್ದು, ಸದ್ರಿ ಸ್ವತ್ತುಗಳ ಮೇಲಿದ್ದ ಮೊಹರನ್ನು ತಾಳೆ ನೋಡಿ ಅದು ಸರಿ ಇದೆ ಎಂದು ಖಾತ್ರಿಪಡಿಸಿಕೊಂಡು ಸದ್ರಿ ಸ್ವತ್ತುಗಳನ್ನು ತೆರೆದು ನೋಡಿದಾಗ ಅವುಗಳಲ್ಲಿ ಈ ಕೆಳಗಿನ ಸ್ವತ್ತುಗಳು ಇದ್ದಿರುತ್ತದೆ.

1) ಸುಮಾರು 15 ಸೆಂ.ಮೀ ಸುತ್ತಳತೆಯ ಸುಮಾರು 40 ಸೆಂ.ಮೀ. ಉದ್ದದ ಮರದ ಕೊರಡು

2) ನೀಲಿ ಬಣ್ಣದ ಚಡ್ಡಿ

3) ಗೆರೆಗಳಿರುವ ಮಾಸಿದ ಹಳೆಯ ಅಂಗಿ - 1

4) ಗೀತಾಂಜಲಿ ಸಿಲ್ಕ ಎಂದು ಬರೆದಿರುವ ಕೈ ಚೀಲ – 1

ಸದ್ರಿ ಸ್ವತ್ತುಗಳನ್ನು ನಾನು ಸಿರಾಲಜಿ ಪರೀಕ್ಷೆ ಮಾಡಿದ್ದು, ಸದ್ರಿ ನಾಲ್ಕೂ ಸ್ವತ್ತುಗಳಲ್ಲಿ ರಕ್ತದ ಗುರುತುಗಳಿದ್ದವು. ಸದ್ರಿ ರಕ್ತವು ಮಾನವ ಮೂಲದ್ದಾಗಿದ್ದು, ಕ್ರಮ ಸಂಖ್ಯೆ 1 ರಿಂದ 4 ರಲ್ಲಿ ಕಂಡು ಬಂದ ರಕ್ತದ ಮಾದರಿ ಯಾವುದು ಅಂತ ಕಂಡು ಹಿಡಿಯಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ನಾನು ದಿನಾಂಕಃ30-11-2022ರಂದು ನನ್ನ ಅಭಿಪ್ರಾಯ ವರದಿ ನೀಡಿರುತ್ತೇನೆ. ಸಾಕ್ಷಿ ಸದ್ರಿ ಅಭಿಪ್ರಾಯ ವರದಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-29 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-29ಬಿ ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ ತಾನು ಸಿರಾಲಜಿ ಪರೀಕ್ಷೆ ಮಾಡಿದ ಸ್ವತ್ತುಗಳಾದ (1) ಸುಮಾರು 15 ಸೆಂ.ಮೀ ಸುತ್ತಳತೆಯ ಸುಮಾರು 40 ಸೆಂ.ಮೀ. ಉದ್ದದ ಮರದ ಕೊರಡು (2) ನೀಲಿ ಬಣ್ಣದ ಚಡ್ಡಿ (3) ಗೆರೆಗಳಿರುವ ಮಾಸಿದ ಹಳೆಯ ಅಂಗಿ - 1 (4) ಗೀತಾಂಜಲಿ ಸಿಲ್ಕ ಎಂದು ಬರೆದಿರುವ ಕೈ ಚೀಲ – 1 ಇವುಗಳನ್ನು ನೋಡಿ ಗುರುತಿಸಿದ್ದು ಸದ್ರಿ ಸ್ವತ್ತುಗಳನ್ನು ಈಗಾಗಲೇ ಮು.ಮಾ.1 ರಿಂದ ಮು.ಮಾ.4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಕೆ ವಕೀಲರಿಂದ**

ನಾನು ಪರೀಕ್ಷೆ ಮಾಡಿದ ನನ್ನ ಮುಂದೆ ಹಾಜರುಪಡಿಸಿದ ಸ್ವತ್ತುಗಳ ಮೇಲೆ ರಕ್ತದ ಮಾದರಿ ಪರೀಕ್ಷೆ ಮಾಡಲು ಉಪಯೋಗಿಸಿದ ರಾಸಾಯನಿಕದ ಅವಧಿ ಬಗ್ಗೆ ವರದಿಯಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿ ನಮ್ಮ ಸಂಸ್ಥೆಯಲ್ಲಿ ನಾವು ಉಪಯೋಗಿಸುವಂತಹಾ ಹ್ಯೂಮನ್ ಆ್ಯಂಟಿಸಿರಾ ಸಂಸ್ಥೆಯಿಂದಲೇ ನಮಗೆ ನೀಡಲಾಗುತ್ತದೆ ಅವು ಅವಧಿ ಮೀರಿದ್ದಾಗಿರುವುದಿಲ್ಲ ಅಂತ ಸಾಕ್ಷಿ ನುಡಿಯುತ್ತಾರೆ. ಯಾವುದೇ ಒಂದು ರಕ್ತದ ಮಾದರಿ ಪರೀಕ್ಷೆ ಮಾಡಲು ಬೆನ್‌ಝಿಡೀನ್ ಅಥವಾ ಪಿನಾಪ್ತಲೀನ್ ಪರೀಕ್ಷೆಗೆ ಒಳಪಡಿಸಿದಾಗ ಕೆಲವೊಮ್ಮೆ ಅದು ನಕಾರಾತ್ಮಕ ರಿಸಲ್ಟ ನೀಡುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ ಸಾಕ್ಷಿ ಈ ಪ್ರಕರಣದಲ್ಲಿ ನಾವು ಮಾಡಿದ ಪರೀಕ್ಷೆ ರಕ್ತದ ಬಣ್ಣವನ್ನು ಮುಂದುವರಿದು Takayama Crystal Test ಮಾಡಿ ಖಾತ್ರಿಪಡಿಸಿಕೊಂಡಿದ್ದೇನೆ ಅಂತ ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ವರದಿಯಲ್ಲಿ ಕಾಣಿಸಿದ ಐ.ಓ ಮಾರ್ಕಿಂಗ್ 1 ರಿಂದ 4 ಸ್ವತ್ತು ಇವುಗಳನ್ನು ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿ ಅಲ್ಲಾ. ತನಿಖಾಧಿಕಾರಿಗೆ ಅನುಕೂಲವಾಗುವಂತೆ ನಾನು ನಿಪಿ-29 ರಂತೆ ವರದಿ ನೀಡಿದ್ದೇನೆ ಎಂದರೆ ಸರಿ

ಅಲ್ಲಾ. ಮು.ಮಾ.1 ರಿಂದ 4 ಮತ್ತು ನಾನು ಪರೀಕ್ಷೆ ಮಾಡಿದ ಐ.ಓ ಮಾರ್ಕಿಂಗ್ 1 ರಿಂದ 4 ಮತ್ತು ನ್ಯಾಯಾಲಯದ ಮುಂದಿರುವಂತಹಾ ಸ್ವತ್ತುಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಮತ್ತು ಅದನ್ನು ನಾನು ಪರೀಕ್ಷೆ ಮಾಡಿ ಯಾವುದೇ ವರದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ಇವತ್ತೇ ಪರಥಮ ಬಾರಿಗೆ ನಾನು ನ್ಯಾಯಾಲಯದ ಮುಂದೆ ಮು.ಮಾ.1 ರಿಂದ 4 ಸ್ವತ್ತುಗಳನ್ನು ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**